ಸಾಕ್ಷಿಯನ್ನು ದಿಃ **09-10-2018** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ_ ಶ್ರೀ ಎಮ್ ಎ ಪೂಜಾರ ವಕೀಲರಿಂದಃ

ಜವಾಹರ ಇವರು ಯಾವಾಗಲೂ ಬೆಟಗೇರಿಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ಹುಬ್ಬಳ್ಳಿಯಲ್ಲಿ ವಾಸವಾಗಿದ್ದರು ಎನ್ನುತ್ತಾರೆ. ಜವಾಹರು ಇವರಿಗೆ ಹಾಗೂ ದಾವಾ ಆಸ್ತಿಗೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕಾಣಿಸಿದಂತಹ ಅಂಶಗಳ ಬಗ್ಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅಧಿಕಾರದ ಪತ್ರ ಬರೆದು ಕೊಟ್ಟವರ ಆಧಾರದ ಮೇಲೆ ತೀರಿಕೊಂಡಿರುವದರಿಂದ ಅದರ ಮೇಲೆ ಪ್ರಕರಣದಲ್ಲಿ ಮುಂದುವರೆಯಲು ಬರುವುದಿಲ್ಲ್ ಹಾಗೂ ಮೃತ್ಯು ಪತ್ರದ ಮುಖಾಂತರ ಅದಿಕಾರ ನಡೆಸಲು ಬರುವುದಿಲ್ಲ ಎಂದರೆ ಸುಳ್ಳು ಜವಾಹರು ಹೆಂಡತಿ ತೀರಿಕೊಂಡಿದ್ದಾರೆ ಎಂದರೆ ಸರಿ ಅವರಿಗೆ ಒಬ್ಬ ಮಗ ಇದ್ದು ಅವರು ಸಹ ತೀರಿಕೋಂಡಿದ್ದಾರೆ ಎಂದರೆ ಸರಿ. ಜವಾಹರು ಮತ್ತು ನಾನು ಬೇರೆ ಬೇರೆ ಯಾಗಿ 25 ವರ್ಷ ಆಗಿದೆ. ಜವಾಹರು ಇವರು ನನ್ನ ಮನೆಯಲ್ಲಿ ಇರಲಿಲ್ಲ, ಹಾಗೂ ಈ ಪ್ರಕರಣದ ಬಗ್ಗೆ ಜವಾಹರು ಇವರು ನನಗೆ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಜವಾಹರು ಇವರು ಸತ್ತಿರಿರುವುದರಿಂದ ಅಬೇಟ್ ಆಗುತ್ತದೆ ಅದಕ್ಕಾಗಿ ನಾನು ಸುಳ್ಳು ಕಾಗದ ಪತ್ರಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣ ನಡೆಸಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಕೋರಿಗೆ ಮೇರೆಗೆ ಮುಂದೂಡಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

**ಸಹಿ/-09.10.2018**

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ.